C.NO: 2903280/2021

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 23 [illegible] 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 16.08.2021

## ಅನಧಿಕೃತ ಟಿಪ್ಪಣಿ

ವಿಷಯ: ಎಲ್ಲಾ ಫಲಾನುಭವಿ ಆಧಾರಿತ ಯೋಜನೆಗಳನ್ನು ಕೋರ್-ಡಿಬಿಟಿ ಪೋರ್ಟಲ್ ಅಡಿಯಲ್ಲಿ ತರುವ ಕುರಿತು.

ಉಲ್ಲೇಖ: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,(ಇ-ಆಡಳಿತ) ರವರ ಪತ್ರ ಸಂಖ್ಯೆ: CEG-27047/6/20-21 ದಿ: 30.04.2021 ಮತ್ತು 15.07.2021.

******

ಎಲ್ಲಾ ಫಲಾನುಭವಿ ಆಧಾರಿತ ಯೋಜನೆಗಳನ್ನು ಕೋರ್ ಡಿಬಿಟಿ ಪೋರ್ಟಲ್ ಅಡಿಯಲ್ಲಿ ತರುವ ಸಂಬಂಧ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಎಲ್ಲಾ ಇಲಾಖೆಗಳ ಮುಖ್ಯಸ್ಥರು / ಮಂಡಳಿಗಳು / ಕಾರ್ಪೋರೇಷನ್ / ಸೊಸೈಟಿಗಳು / ಸ್ವಾಯತ್ತ ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡುವಂತೆ ಉಲ್ಲೇಖದ ಪತ್ರಗಳಲ್ಲಿ ಕೋರಲಾಗಿತ್ತು. ಡಿಬಿಟಿ ಪ್ಲಾಟ್‌ಫಾರ್ಮ್‌ನಲ್ಲಿ ಆನ್‌ಬೋರ್ಡಿಂಗ್‌ಗಾಗಿ ಸಮಯದ ಮಿತಿಯನ್ನು ನಿಗದಿಗೊಳಿಸಲು ಮತ್ತು ಪ್ರಕ್ರಿಯೆಯನ್ನು ತಕ್ಷಣವೇ ಅಂತಿಮಗೊಳಿಸಲು ಹಾಗೂ ನಾಗರೀಕರಿಗೆ (ನಗದು ಅಥವಾ ಇನ್ನಿತರ ವಿಧದಿಂದ) ಪ್ರಯೋಜನಗಳನ್ನು ವಿತರಿಸಲು ಆಡಳಿತಾತ್ಮಕ ಇಲಾಖೆಗಳು ಕ್ರಮವಹಿಸಬೇಕಾಗಿದೆ.

ಒಂದೆರಡು ಇಲಾಖೆಗಳನ್ನು ಹೊರತುಪಡಿಸಿ, ಇತರ ಇಲಾಖೆಗಳ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಯನ್ನು ಸಂಪರ್ಕಿಸಿಲ್ಲ ಅಥವಾ ಡಿಬಿಟಿ ಪ್ಲಾಟ್‌ಫಾರ್ಮ್‌ಗೆ ಆನ್‌ಬೋರ್ಡಿಂಗ್‌ಗಾಗಿ ತಮ್ಮ ಯೋಜನೆಗಳನ್ನು ತಿಳಿಸಿಲ್ಲವೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,(ಇ-ಆಡಳಿತ) ರವರು ತಿಳಿಸಿರುತ್ತಾರೆ.

"ಎಲ್ಲಾ ಸರ್ಕಾರಿ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳಿಗೆ ಡಿಬಿಟಿ ಪ್ಲಾಟ್‌ಫಾರ್ಮ್ ನಲ್ಲಿ ಪಾವತಿ ಮಾಡುವ ಬಗ್ಗೆ'' ಬಜೆಟ್ ಭರವಸೆಯನ್ನು ಉಳಿಸಿಕೊಳ್ಳಬೇಕಾಗಿರುವುದರಿಂದ, ಸಂಬಂಧಪಟ್ಟ ಇಲಾಖೆಗಳು ಅವರ ಅಧೀನದಲ್ಲಿ ಬರುವ ಇಲಾಖೆಗಳು ಡಿಬಿಟಿ ಪ್ಲಾಟ್‌ಫಾರ್ಮ್ ನಲ್ಲಿ ಆನ್‌ಬೋರ್ಡಿಂಗ್ ಗಾಗಿ ಸಮಯದ ಮಿತಿಯನ್ನು ನಿಗದಿಪಡಿಸಬೇಕು ಮತ್ತು ಪ್ರಕ್ರಿಯೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ನೊಂದಿಗೆ ದಿನಾಂಕ: 25.08.2021ರೊಳಗೆ ಅಂತಿಮಗೊಳಿಸಬೇಕು, ಇಲ್ಲವಾದಲ್ಲಿ ದಿ:01.09.2021 ರ ನಂತರ ಖಜಾನೆಗಳಿಂದ ಫಲಾನುಭವಿ ಆಧಾರಿತ ಯೋಜನೆಗಳಿಗೆ ಸಂಬಂಧಿಸಿದ ಯಾವುದೇ ಬಿಲ್ಲುಗಳನ್ನು ಇತ್ಯರ್ಥಗೊಳಿಸಲಾಗುವುದಿಲ್ಲ ಎಂದು ನಿರ್ಧರಿಸಲಾಗಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಎಲ್ಲಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ನಾಗರೀಕರಿಗೆ ಪ್ರಯೋಜನವನ್ನು ನಗದು ಅಥವಾ ಇನ್ನಿತರೆ ವಿಧದಲ್ಲಿ ವಿತರಿಸುವ ತಮ್ಮ ಆಡಳಿತಾತ್ಮಕ ಇಲಾಖೆಗಳಿಗೆ ಮತ್ತು ಅವರ ಆಡಳಿತದ ನಿಯಂತ್ರಣದಲ್ಲಿರುವ ಎಲ್ಲಾ ವಿಭಾಗದ ಮುಖ್ಯಸ್ಥರು / ಮಂಡಳಿಗಳು / ನಿಗಮ / ಸೊಸೈಟಿಗಳು / ಸ್ವಾಯತ್ತ ಸಂಸ್ಥೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇಲಾಖೆಯೊಂದಿಗೆ ಡಿಬಿಟಿ ಪ್ಲಾಟ್‌ಫಾರ್ಮ್‌ಗೆ ಆನ್‌ಬೋರ್ಡಿಂಗ್‌ಗಾಗಿ ಸಮಯದ ಮಿತಿಯನ್ನು ನಿಗದಿಪಡಿಸಬೇಕು ಮತ್ತು ಪ್ರಕ್ರಿಯೆಯನ್ನು ಅಂತಿಮಗೊಳಿಸಲು ಹಾಗೂ ವಿವರಗಳನ್ನು ದಿನಾಂಕ: 25.08.2021ರೊಳಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇಲಾಖೆಗೆ ಸಲ್ಲಿಸುವಂತೆ ಆದೇಶ ನೀಡಲು ಕೋರಲಾಗಿದೆ.

(ಐ.ಎಸ್.ಎನ್ ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

21/8/2021

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.
2. ಆಯುಕ್ತರು, ಖಜಾನೆ ಇಲಾಖೆ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್,5 & 6ನೇ ಮಹಡಿ, ಪ್ಯಾಲೇಸ್ ರಸ್ತೆ, ಡ್ರಗ್ ಕಂಟ್ರೋಲ್ ಬಿಲ್ಡಿಂಗ್, ಬೆಂಗಳೂರು – 560001.
3. ಯೋಜನ ನಿರ್ದೇಶಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,(ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.